| | | |
|---|---|---|
| OS | 206/2022 | ಪಿ.ಡಬ್ಲ್ಯೂ: 2 |

ಇಂದು ದಿ: 25.06.2025. ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ವಾದಿಪರ ಶ್ರೀ ಬಿ ಎಂ ಎಸ್ ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿರುತ್ತೇನೆ.

ಪಾಟೀ ಸವಾಲು: ಶ್ರೀ ಎಂ ಜಿ ಎಸ್ ವಕೀಲರಿಂದ.

ಹೊಸಕಡಜಟ್ಟಿ ಗ್ರಾಮದಿಂದ ಹರಿಯೂರಿಗೆ ಅರ್ಧ ಫರ್ಲಾಂಗ ಅಂತರ ಇದೆ. ನಾನು ಹರಿಯೂರು ಗ್ರಾಮದ ಸರ್ವೆ ನಂ.95 ರ ಕುರಿತಂತೆ ಸಾಕ್ಷಿ ನುಡಿಯಲು ಬಂದಿದ್ದೇನೆ. ಸರ್ವೆ ನಂ.95 ಕೇವಲ 2 ಎಕರೆ 20 ಗುಂಟೆ ಇದೆ. ದಾವಾ ಜಮೀನು ನಮ್ಮ ಜಮೀನಿನ ಸರ್ವೆ ನಂ.98ರ ಪಕ್ಕದಲ್ಲಿದೆ. ಸರ್ವೆ ನಂ.98ರ ಜಮೀನನನ್ನು ನಾನು 5 ವರ್ಷಗಳಿಂದ ಭೋಗ್ಯಕ್ಕೆ ಹಾಕಿಸಿಕೊಂಡಿದ್ದೇನೆ. ಭೋಗ್ಯ ಪತ್ರ ನೊಂದಾವಣೆ ಆಗಿದೆ ಅದನ್ನು ನ್ಯಾಯಾಲಯಕ್ಕೆ ಕೊಡಬಹುದು. ದಾವಾ ಜಮೀನು ಮತ್ತು ಸರ್ವೆ ನಂ.98 ಅಕ್ಕಪಕ್ಕದ ಜಮೀನುಗಳಾಗಿರುತ್ತವೆ. ಭೋಗ್ಯ ಪತ್ರದ ಪ್ರಕಾರ ದಾವಾ ಆಸ್ತಿ ನನ್ನ ಜಮೀನಿನ ಉತ್ತರದ ಕಡೆಗೆ ಇದೆ. ನನ್ನ ಭೋಗ್ಯ ಪತ್ರದಲ್ಲಿ ಉತ್ತರದ ಕಡೆಗೆ ಕಂದೇಗಾಲ ಮಾಸ್ಟರ್ ರವರ ಹೆಸರು ಇದೆ. ಉತ್ತರದ ಕಡೆಗೆ ವಾದಿಯರ ಅಥವಾ ಅವರ ಪೂರ್ವಿಕರ ಹೆಸರು ಬಂದಿಲ್ಲ. ನಾನು ಭೋಗ್ಯಕ್ಕೆ ಹಾಕಿಕೊಂಡಿದ್ದೇನೆ ಎಂದರೆ ಸುಳ್ಳು ಮತ್ತು ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ನನ್ನ ಜಮೀನು ಭೋಗ್ಯದ ಜಮೀನು ಎನ್ನುತ್ತಾರೆ. ದಾವಾ ಸರ್ವೆ ನಂಬರ್ ಒಟ್ಟು 4 ಎಕರೆ ಇದೆ ಎಂದರೆ ಸರಿಯಲ್ಲ. ದಾವಾ ಜಮೀನು ನಾನು 30 ವರ್ಷಗಳಿಂದ ಗೊತ್ತು. ಕೋಟಪ್ಪ ದಾವಾ ಜಮೀನಿನ ಮಾಲೀಕರು. ದಾವಾ ಜಮೀನು ಕೋಟಪ್ಪರವರಿಗೆ ಹೇಗೆ ಬಂತು ಎಂದು ನಾನು ದಾಖಲೆ ನೋಡಿಲ್ಲ. ನಿಜ ವಿಚಾರ ತಿಳಿಯದಿದ್ದರೂ ಸಹ ನಾನು 2ನೇ ವಾದಿ ಹೇಳಿಕೊಟ್ಟಷ್ಟು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.